ಸಾಕ್ಷಿ ಯನ್ನು ದಿಃ 14.11.2025 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ**

1. ಎದುರುದಾರರು ನನಗೆ ಹೊಡೆಯವುದು ಬಡಿಯುವುದು ಮಾಡುತ್ತಿದ್ದರಿಂದ ಅವರ ವಿರುದ್ಧ ಈ ಅರ್ಜಿ ಹಾಕಿರುತ್ತೇನೆ. ಆ ಬಗ್ಗೆ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ.
2. ನಾನು ಈಗ ಒಂದೂರೆ ವರ್ಷದಿಂದ ಚಿಲ್ಲರೆ ಅಂಗಡಿ ಇಟ್ಟುಕೊಂಡು ರಾವಂದೂರು ಗ್ರಾಮದಲ್ಲಿ ವಾಸವಿದ್ದೇನೆ. ಅದಕ್ಕಿಂತ ಹಿಂದೆ ನನ್ನ ತಾಯಿ ಮನೆಯಲ್ಲಿ ವಾಸವಿದ್ದೆ.
3. ನನ್ನ ಚಿಲ್ಲರೆ ಅಂಗಡಿಯಲ್ಲಿ ದಿನಕ್ಕೆ ಸುಮಾರು 1 ರಿಂದ ಒಂದೂವರೆ ಸಾವಿರ ವ್ಯಾಪಾರ ಆಗುತ್ತದೆ. ಖರ್ಚು ಕಳೆದು ದಿನಕ್ಕೆ 100-150 ರೂಪಾಯಿ ಉಳಿಯುತ್ತದೆ. ಸದರಿ ಚಿಲ್ಲರೆ ಅಂಗಡಿ ಹೆಸರು ಮನ್ವಿತ್ ಪೂರ್ವಿಕಾ ಪ್ರಾವಿಜನ್ ಸ್ಟೋರ್.
4. ನನ್ನ ತಂದೆ ಮನೆಯಲ್ಲಿ 2020 ರಿಂದ 2023 ರ ವರೆಗೆ ವಾಸವಿದ್ದೆ.
5. ನನ್ನ ಮಕ್ಕಳು ಫೆಬ್ರುವರಿ 2020 ರಿಂದ ಎದುರುದಾರರ ಜೊತೆ ವಾಸವಿದ್ದಾರೆ. ಈಗಲೂ ಸಹ ಮಕ್ಕಳು ಅವರ ಜೊತೆ ಇದ್ದಾರೆ.
6. ನಿಮ್ಮ ಮಕ್ಕಳ ವಿದ್ಯಾಭ್ಯಾಸದ ಖರ್ಚನ್ನು ಈಗ ಎದುರುದಾರರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ.
7. ನನಗೆ ಪಡಿತರ ಚೀಟಿ ಇಲ್ಲ. ನನ್ನ ತಾಯಿ ಮನೆಯಿಂದ ಹಾಗೂ ಸಂಬಂಧಿಕರು ಅಕ್ಕಿ, ಬೇಳೆ ಹಾಗೂ ತರಕಾರಿ ಕೊಡುತ್ತಾರೆ. ಎದುರುದಾರರ ಪಡಿತರ ಚೀಟಿಯಲ್ಲಿ ನನ್ನ ಹೆಸರು ಇದೆ.
8. ನನ್ನ ಜೊತೆ ನನ್ನ ಅಣ್ಣನ ಮಗ ಹಾಗೂ ಅಜ್ಜ ಇದ್ದಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ